O.S.No.:370/2018
P.W.:3

ಈ ದಿನ ದಿಃ16.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿಯರ ಪರ ಶ್ರೀ ಆರ್.ಸಿ ವಕೀಲರಿಂದಃ

1. ಈ ದಾವೆಯನ್ನು ಶಿವಲಿಂಗಯ್ಯ ರವರು ದೀಲೀಪ್ ಕುಮಾರ್ ರವರ ವಿರುದ್ಧ ಹೂಡಿರುತ್ತಾರೆ. ಈ ದಾವೆಯನ್ನು ಸರ್ವೆ ನಂ.211/3ಕ್ಕೆ 1ಎಕರೆ 14 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಶಿವಲಿಂಗೇಗೌಡ ರವರ ಜಮೀನು, ಪಶ್ಚಿಮಕ್ಕೆ ಲಕ್ಷ್ಮಿ ದೇವಮ್ಮ ಆಂದರೆ ನಮ್ಮ ಜಮೀನು ಬರುತ್ತದೆ, ಉತ್ತರಕ್ಕೆ ರಸ್ತೆ ಇರುತ್ತದೆ ಮತ್ತು ದಕ್ಷಿಣಕ್ಕೆ ಹಳ್ಳ ಬರುತ್ತದೆ. ವಾದಿಯು ದಾವಾಸ್ವತ್ತು ತಮಗೆ ಕ್ರಮವಾಗಿ ಇರಬೇಕು ಎಂದು ಪರಿಹಾರ ಕೋರಿ ಹೂಡಿರುತ್ತಾರೆ. ನಮ್ಮ ಜಮೀನಿನ ಸರ್ವೆ ನಂ.598 ಆಗಿರುತ್ತದೆ, ಅದರ ಚಕ್ಕುಬಂದಿ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ಶಿವಲಿಂಗೇಗೌಡ ರವರ ಜಮೀನು, ಉತ್ತರಕ್ಕೆ ನಂಜೇಗೌಡ ರವರ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಬರುತ್ತದೆ. ನಮ್ಮ ಜಮೀನಿನ ಪಶ್ಚಿಮಕ್ಕೆ ಪ್ರತಿವಾದಿಯ ತಂದೆಗೆ ಸೇರಿದ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ಪಶ್ಚಿಮಕ್ಕೆ ಬರುವುದಿಲ್ಲ ಅವರ ಜಮೀನು ಉತ್ತರಕ್ಕೆ ಬರುತ್ತದೆ ಎಂದು ನುಡಿಯುತ್ತಾರೆ. ನಮ್ಮಜ ಮೀನಿನ ಪಶ್ಚಿಮಕ್ಕೆ ವಾದಿಯ ಜಮೀನು ಬರುವುದಿಲ್ಲ ಅಲ್ಲಿ ಪ್ರತಿವಾದಿಯ ತಂದೆಗೆ ಸೇರಿದ ಜಮೀನು ಬರುತ್ತದೆ ಎಂದರೆ ಸರಿಯಲ್ಲ.

2. ವಾದಿಯು ದಾವಾಸ್ವತ್ತನ್ನು ಸೀನಾಪ್ಪ ಎನ್ನುವವರಿಂದ ಖರೀದಿಸಿರುತ್ತಾರೆ. ಯಾವಾಗ ಖರೀದಿಸಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಖರೀದಿಯ ಕಾಲಕ್ಕೆ ನೀವು ಏನಾದರೂ ಹಾಜರು ಇದ್ರ ಎಂದರೆ ಸಾಕ್ಷಿಯು ಇರಲಿಲ್ಲ, ಆದರೆ 40ವರ್ಷಗಳಿಂದ ಅಜುಬಾಜು ಇರುವ ಕಾರಣಕ್ಕೆ ನನಗೆ ಆ ಬಗ್ಗೆ ಗೊತ್ತು ಎಂದು ನುಡಿಯುತ್ತಾರೆ. ಕ್ರಯಪತ್ರವಾಗುವ ಕಾಲಕ್ಕೆ ನಾನು ಹಾಜರು ಇಲ್ಲದೆ ಇರುವ ಕಾರಣಕ್ಕೆ ನನಗೆ ಖರೀದಿಯ ಬಗ್ಗೆ ಮಾಹಿತಿ ಇಲ್ಲದೆ ಇದ್ದರು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಚಕ್ಕುಬಂದಿಯ ನಡುವೆ ವಾದಿಯು ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾಸ್ವತ್ತಿನ ಸ್ವಾಧೀನಾನುಭವದಲ್ಲಿ ಇಲ್ಲದೆ ಇದ್ದರು ಸ್ವಾಧೀನಾನುಭವದಲ್ಲಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾದಿಯು ಬೆಳೆದಂತಹ ಬೆಳೆಗಳನ್ನು ಪ್ರತಿವಾದಿ ಯಾವ ತಿಂಗಳು ವರ್ಷ ಮತ್ತು ದಿನಾಂಕದಂದು ನಾಶ ಪಡಿಸಿರುತ್ತಾರೆ ಎಂದು ನಿಮಗೆ ಹೇಳಲು ಆಗುತ್ತದೆ ಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಯಾವಾಗ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ವಾದಿಗೆ ಬಂದು ತೊಂದರೆ ಕೊಟ್ಟಾಗ ಮಧ್ಯಾಹ್ನ 11ಃ30 ಆಗಿರಬಹುದು. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ತೊಂದರೆ ಕೊಟ್ಟ ಸಮಯವನ್ನು ನಾನು ಹೇಳಿ ಬರೆಸಿಲ್ಲ. ಜೆಸಿಬಸಿಯ ಸಂಖ್ಯೆ ನನಗೆ ಗೊಿತಲ್ಲ, ಜೆಸಿಬಿಯ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಸುಮಾರು 40 ಜನರು ಸ್ಥಳದಲ್ಲಿ ಹಾಜರಿದ್ದರು. ಅವರ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿ ಯಾವತ್ತು ವಾದಿಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಗೆ ಯಾವುದೇ ಪ್ರಕಾರವಾಗಿ ತೊಂದರೆ ಕೊಡದೆ ಇದ್ದರು ತೊಂದರೆ ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಪೂರ್ವಕ್ಕೆ ಮತ್ತು ನಮ್ಮ ಜಮೀನಿನ ಪಶ್ಚಿಮಕ್ಕೆ ಬರುವ ಪ್ರತಿವಾದಿಯ ಸ್ವತ್ತಿಗೆ ಅವರು ಕಾಂಪೌಂಡು ಹಾಕಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವರ ಜಮೀನು ಇಲ್ಲದೆ ಇದ್ದರು ದೌರ್ಜನ್ಯದಿಂದ ನಮ್ಮ ಜಮೀನನ್ನು ಸಹ ಸೇರಿಸಿ ಕಾಂಪೌಂಡ್ ಹಾಕಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಮ್ಮ ಜಮೀನನ್ನು ಸೇರಿಸಿ ಕಾಂಪೌಂಡು ಹಾಕಿಕೊಂಡ ಬಗ್ಗೆ ನಾನು ಆತನ ವಿರುದ್ಧ ಯಾವುದೇ ದೂರು ನೀಡಿಲ್ಲ. ನನಗೆ ಸೇರಿದ 2ಎಕರೆ ಜಮೀನನ್ನು ಪ್ರತಿವಾದಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಪ್ರತಿವಾದಿ ಈ ರೀತಿ ಒತ್ತುವರಿ ಮಾಡಿಕೊಂಡಿದ್ದರೂ ಸಹ ನೀವು ಸುಮ್ಮನೆ ಇದ್ದೀರಾ ಎಂದರೆ ಸಾಕ್ಷಿಯು ನಾವು ಆ ಬಗ್ಗೆ ನಾವು ಕೇಳಲು ಹೋಗಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಸಂಬಂಧಿಸಿದ ಎಷ್ಟು ವಿಸ್ತೀರ್ಣದ ಜಮೀನನ್ನು ಪ್ರತಿವಾದಿ ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ನಿಮಗೆ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು 15 ರಿಂದ 20 ಗುಂಟೆ ಜಮೀನು ಒತ್ತುವರಿ ಮಾಡಿಕೊಂಡಿರಬಹುದು ಎಂದು ನುಡಿಯುತ್ತಾರೆ.

4. ಸುಮಾರು 60-70 ವರ್ಷಗಳಿಂದ ತಮ್ಮ ಜಮೀನಿನಲ್ಲಿ ಪ್ರತಿವಾದಿಯ ಕುಟುಂಬದವರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಜಮೀನು ಅಗಲೀ ವಾದಿಯ ಜಮೀನನ್ನು ಅಗಲಿ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನು ನಮ್ಮ ಜಮೀನಿಗೆ ಲಗತ್ತಾಗಿರುವ ಕಾರಣಕ್ಕೆ ಆ ಜಮೀನನ್ನು ಹೊಡೆದುಕೊಳ್ಳಲು ನಾನು ಪ್ರಯತ್ನಪಟ್ಟಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿ ತಮ್ಮ ಜಮೀನನ್ನು ನನಗೆ ಮಾರಾಟ ಮಾಡದೆ ಇರುವ ಕಾರಣಕ್ಕೆ

O.S.No.:370/2018
P.W.:3

ನನಗೆ ಅವರ ವಿರುದ್ದ ದ್ವೇಷ ಅಸೂಯೆ ಭಾವನೆ ಇದೆ ಎಂದರೆ ಸರಿಯಲ್ಲ. ಈ ಕಾರಣಕ್ಕೆ ನಾನು ವಾದಿಯ ಪರವಾಗಿ ಪ್ರತಿವಾದಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

(ರಾಧ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.